International Journal of Kannada Research 2023; 9(3): 31-33




International Journal of Kannada Research
www.kannadajournal.com

**ISSN: 2454–5813**
IJKR 2023; 9(3): 31-33
© 2023 IJKR
www.kannadajournal.com
Received: 13-06-2023
Accepted: 16-07-2023

**ಸುಚಿತ್ರಾ ಟಿ**
ಸಹಾಯಕ ಪ್ರಾಧ್ಯಾಪಕರು,
ಡಾ.ಜಿ.ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ, ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

**Corresponding Author:**
**ಸುಚಿತ್ರಾ ಟಿ**
ಸಹಾಯಕ ಪ್ರಾಧ್ಯಾಪಕರು,
ಡಾ.ಜಿ.ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ, ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಅಜ್ಜರಕಾಡು, ಉಡುಪಿ, ಕರ್ನಾಟಕ, ಭಾರತ

# ಭಾರತದಲ್ಲಿ ಮಹಿಳಾ ಚಳುವಳಿ

**ಸುಚಿತ್ರಾ ಟಿ**

**DOI:** https://doi.org/10.22271/24545813.2023.v9.i3a.847

**ಪೀಠಿಕೆ**

ಸಾಮಾಜಿಕ ಚಳುವಳಿಯೆಂಬುದು ಒಂದು ಆಧುನಿಕ ಪರಿಕಲ್ಪನೆಯಾದರೂ, ಪ್ರಾಚೀನ ಕಾಲದಿಂದಲೂ ಸಮಾಜ ಬದಲಾವಣೆಗಳಿಗೆ ತನ್ನನ್ನು ತೆರೆದುಕೊಂಡಿದೆ. ಸಮಾಜ ಯಾವತ್ತಿಗೂ ನಿಂತ ನೀರಲ್ಲ, ಸದಾ ಬದಲಾವಣೆಗೆ ಒಳಪಡುತ್ತಲೇ ಇರುತ್ತದೆ. ಸಾಮಾಜಿಕ ಚಳುವಳಿ ಒಂದು ವಿಶೇಷವಾದ ಸಾಮೂಹಿಕ, ಸಾಮುದಾಯಿಕ ಪ್ರಕ್ರಿಯೆಯಾಗಿದೆ. ಕಾರ್ಮಿಕ ಚಳುವಳಿ, ರೈತ ಚಳುವಳಿ, ದಲಿತ ಚಳುವಳಿ, ಮಹಿಳಾ ಚಳುವಳಿಗಳು ಈ ರೀತಿಯ ಸಾಮುದಾಯಿಕ ಚಳುವಳಿಗಳಾಗಿ ಗುರುತಿಸಿಕೊಂಡಿದೆ. ಚಳುವಳಿ ಎನ್ನುವುದು ಇಂಗ್ಲೀಷ್‌ನ 'ಮೂವ್‌ಮೆಂಟ್' ಎಂಬ ಶಬ್ದದ ಸಮಾನಾರ್ಥಕವಾಗಿ ಚಲನೆಯನ್ನು ತಿಳಿಸುತ್ತದೆ.

ಹರ್‌ಬರ್ಟ್ಸ್ ಬ್ಲೂಮರನ ಪ್ರಕಾರ "ಹೊಸ ಜೀವನ ಕ್ರಮವನ್ನು ಸ್ಥಾಪಿಸುವುದಕ್ಕಾಗಿ ಮಾಡುವ ಸಾಮೂಹಿಕ ಪ್ರಯತ್ನವೇ ಸಾಮಾಜಿಕ ಚಳುವಳಿಯಾಗಿದೆ". ಸಾಮಾಜಿಕ ಚಳುವಳಿಗಳು ಗೊಂದಲದ ಸ್ಥಿತಿಯಿಂದ ಅಥವಾ ಪ್ರಸ್ತುತ ಜೀವನ ಕ್ರಮದ ಅತೃಪ್ತಿಯಿಂದ ಪ್ರಾರಂಭವಾಗುತ್ತದೆ. ಹೊಸ ಜೀವನ ಕ್ರಮದ ಭರವಸೆಯಿಂದ ಸ್ಫೂರ್ತಿಯನ್ನು ಪಡೆಯುತ್ತದೆ. ಓ ಕೆ ಓಮನ್ ರವರ ಪ್ರಕಾರ "ಪರಿಧಿಯಲ್ಲಿರುವ ಮನುಷ್ಯನು ಕೇಂದ್ರದೆಡೆಗೆ ಚಲಿಸಲು ವ್ಯವಸ್ಥಿತವಾಗಿ ರೂಪಿಸಿಕೊಳ್ಳುವ ಸಾಮೂಹಿಕ ಕ್ರಿಯೆಯನ್ನು ಚಳುವಳಿ ಎನ್ನುತ್ತಾರೆ". ಸಾಮಾಜಿಕ ಚಳುವಳಿ ಒಂದು ಸಾಮೂಹಿಕ ಮತ್ತು ಸಾಮುದಾಯಿಕ ಸ್ವರೂಪದಾಗಿದ್ದು, ಬದಲಾವಣೆ ಅಥವಾ ಬದಾಲಾಣೆಯ ವಿರುದ್ಧದ ಹೋರಾಟವಾಗಿದೆ.

1960ರಲ್ಲಿ ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೇರಿಕದಲ್ಲಿ ಪ್ರಾರಂಭವಾದ ನಾಗರಿಕ ಹಕ್ಕುಗಳ ಹೋರಾಟ, ಯುದ್ಧ ವಿರೋಧಿ ಪ್ರತಿಭಟನೆ, ಲಿಂಗಭೇದದ ವಿರುದ್ಧದ ಹೋರಾಟಗಳು ಪ್ರಾರಂಭಗೊಂಡು, ನಂತರದಲ್ಲಿ ಪರಿಸರ ಚಳುವಳಿ, ಜನಾಂಗ ಭೇದ ಚಳುವಳಿ, ರೈತ ಚಳುವಳಿ ಹಾಗೂ ಮಹಿಳಾ ಚಳುವಳಿಯಂತಹ ಹಲವಾರು ಹೋರಾಟಗಳು ಮುನ್ನೆಲೆ ಕಂಡುಕೊಂಡವು.

**ಮಹಿಳಾ ಚಳುವಳಿ**

ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಸ್ತ್ರೀ–ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯವನ್ನು ಪ್ರಶ್ನಿಸಿ, ತಾರತಮ್ಯವನ್ನು ಬದಲಾಯಿಸಲು ಹಕ್ಕೊತ್ತಾಯಿಸುವ ಒಂದು ರಾಜಕೀಯ ಸಿದ್ಧಾಂತವಾಗಿ, ಪಶ್ಚಿಮದಿಂದ ಭಾರತಕ್ಕೆ ಆಮದಾಗಿರುವ ಹಲವಾರು ವಿಚಾರಧಾರೆಗಳಲ್ಲಿ ಒಂದಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಸಹ ಮಹಿಳಾ ಚಳುವಳಿಗಳೆಲ್ಲವೂ ಒಂದೇ ವಿಷಯ ಕೇಂದ್ರಿತವಾಗಿರಲಿಲ್ಲ. ಕೆಲ ಮಹಿಳಾ ಹೋರಾಟಗಳು ಮಹಿಳೆಯರನ್ನು ಲೈಂಗಿಕ ಭೋಗದ ದೃಷ್ಟಿಯಿಂದ ಕಾಣುವುದರ ವಿರುದ್ಧ, ಕುಟುಂಬದ ಒಳಗೆ ಹಾಗೂ ಹೊರಗೆ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ಹಿಂಸೆ, ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸಿದರೆ, ಕೆಲವು ಮಹಿಳಾ ಪರ ಹೋರಾಟಗಳು ಶಿಕ್ಷಣ, ಉದ್ಯೋಗ, ವೇತನ ಹಾಗೂ ಸವಲತ್ತುಗಳ ಸಮಾನತೆಗಾಗಿ ನಡೆದಿತ್ತು, ಇನ್ನೂ ಕೆಲವು ಚಳುವಳಿಗಳು ತಾಯ್ತನಗಳಲ್ಲಿ ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕುಗಳಿಗೆ ಸಂಬಂಧಿಸಿದ್ದಾಗಿತ್ತು. ಒಟ್ಟಾರೆ ಮಹಿಳಾ ಚಳುವಳಿಗಳ ಉದ್ದೇಶ ಮಹಿಳಾ ವಿಮೋಚನೆಯೇ ಆಗಿತ್ತು. ಆ ಕಾರಣದಿಂದ ಪಶ್ಚಿಮದ ಮಹಿಳೆಯರ 1960, 1970ರ ದಶಕಗಳ ಚಳುವಳಿ ಮಹಿಳಾ

ವಿಮೋಚನಾ ಚಳುವಳಿಯಾಗಿ ಕರೆಯಲ್ಪಟ್ಟಿತು.

**ಭಾರತದಲ್ಲಿ ಮಹಿಳಾ ಚಳುವಳಿ**

ಪಾಶ್ಚಿಮಾತ್ಯ ಮಹಿಳಾ ಚಳುವಳಿಯ ಪ್ರೇರಣೆಗಳಿಂದ ಪ್ರಾರಂಭವಾದ, ಭಾರತೀಯ ಮಹಿಳಾ ಚಳುವಳಿಯು ಇಲ್ಲಿನ ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಿಷಯಗಳಿಂದ ರೂಪಿತವಾಗಿದೆ. ಆಧುನಿಕ ಭಾರತದಲ್ಲಿ ಸಮಾಜ ಸುಧಾರಣಾ ಚಳುವಳಿ, ಸ್ವಾತಂತ್ರ ಹೋರಾಟದಲ್ಲಿ ಮಹಿಳೆಯರ ಭಾಗವಹಿಸುವಿಕೆ, ಭಾರತದ ಸಂವಿಧಾನ ಮತ್ತು ರಾಜ್ಯ ಮಹಿಳಾ ಪರ ಕಾನೂನು ಹಾಗೂ ಕಳೆದ ಎರಡು–ಮೂರು ದಶಕಗಳ ಇಡೀ ಜಗತ್ತನ್ನೇ ಒಂದು ಮಾರುಕಟ್ಟೆಯನ್ನಾಗಿಸುವ ಜಾಗತೀಕರಣದ ಪ್ರಕ್ರಿಯೆಯೊಂದಿಗೆ ಭಾರತದ ಮಹಿಳಾ ಚಳುವಳಿಯ ವ್ಯಾಪ್ತಿಯೊಳಗೆ ಅಧ್ಯಯನ ಮಾಡಬೇಕಾಗಿದೆ.

ಭಾರತೀಯ ಮಹಿಳಾ ಚಳುವಳಿ ಎನ್ನುವುದು ಒಂದು ಸಮಗ್ರವಾದ ಒಂದು ಪರಿಕಲ್ಪನೆಯೇ? ಅದು ಒಂದೇ ಅಥವಾ ಹಲವೇ? ಎಂಬ ಚರ್ಚೆ ನಡೆದರೆ ಅದು ಒಂದಲ್ಲ ಹಲವು ಆಗಿದೆ. ಸುಧಾರಣಾ ಚಳುವಳಿಯಿಂದ ಆರಂಭಿಸಿ ಜಾಗತೀಕರಣದವರೆಗೆ ಭಾರತದ ಮಹಿಳಾ ಚಳುವಳಿ ಅಥವಾ ಮಹಿಳೆಯರ ಜೀವನ ಕ್ರಮದ ಮೇಲೆ ಬೀರಿದ ಪರಿಣಾಮ ಒಂದೇ ಎಂದು ಭಾವಿಸಿದರೆ ಅದೊಂದು ಮೆಟ–ನರೆಟಿವ್ ಆಗಿ ಬಿಡುವ ಮತ್ತು ಸಮಸ್ಯೆಯ ಅಧ್ಯಯನದ ಮೂಲದಲ್ಲೆ ದಾರಿ ತಪ್ಪುವ ಸಂಭವ ಇದ್ದೇ ಇರುತ್ತದೆ. ಮಹಿಳೆಯರ ಸಮಸ್ಯೆಗಳು ಸಂಕೀರ್ಣ ಸ್ವರೂಪದ್ದು ಹಾಗೂ ಬಹುಮುಖಿ. ಉತ್ತರ ಭಾರತದ ಮಹಿಳೆಯರ ಸಮಸ್ಯೆಗಳು ದಕ್ಷಿಣ ಭಾರತದ ಮಹಿಳಾ ಸಮಸ್ಯೆಗಳು ಒಂದೇ ಆಗಿಲ್ಲ. ಹಾಗೆಯೇ ಪಶ್ಚಿಮ ಹಾಗೂ ಪೂರ್ವ ಭಾರತದ ಮಹಿಳಾ ಸಮಸ್ಯೆಗಳು, ಶ್ರೀಮಂತ ಹಾಗೂ ಬಡವರ್ಗಗಳ ಮಹಿಳೆಯರ ಮೇಲಿನ' ಹಿಂಸೆ ಒಂದೇ ಅಲ್ಲ, ನಗರದ ಮಹಿಳೆಯರ ಸಮಸ್ಯೆಗಳು ಗ್ರಾಮೀಣ ಮಹಿಳೆಯರ ಸಮಸ್ಯೆಗಳು ಒಂದೇ ತೆರನಾಗಿಲ್ಲ. ದಲಿತ ಮಹಿಳೆಯರ ಪಾಡು ರೈತ ಮಹಿಳೆಯರ ಸಮಸ್ಯೆ ಸಹ ಬೇರೆ ಬೇರೆ ಅಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಭಿನ್ನ ಸ್ವರೂಪದ್ದಾಗಿದೆ. ಕೆಲ ವರ್ಗದ ಮಹಿಳೆಯರು ವಿಪರೀತದ ಕಟ್ಟುಪಾಡಿಗೆ ಒಳಾಗಾಗಿ ಮನೆಯೊಳಗೆ ಬಂಧಿಯಾದರೆ, ಇನ್ನು ಕೆಲ ವರ್ಗದ ಮಹಿಳೆಯರು ತಲೆಯ ಮೇಲೊಂದು ಸೂರು ಇಲ್ಲದೆ ರಕ್ಷಣೆಯೇ ಇಲ್ಲದೆ ಇರುವಂತಾಗಿದೆ. ನಿರಾಶ್ರಿತ, ಅಲೆಮಾರಿ ಬುಡಕಟ್ಟು ಮಹಿಳೆಯರ ನೋವು ಒಂದು ತೆರನಾದರೆ, ಆಧುನಿಕ ಮಹಿಳೆ ಹಾಗೂ ಉದ್ಯೋಗಸ್ಥ ಮಹಿಳೆಯರ ದೌರ್ಜನ್ಯ ಇನ್ನೊಂದು ರೀತಿಯಾದ್ದಾಗಿದೆ. ಒಬ್ಬ ಮಹಿಳೆ ಗೃಹಿಣಿಯಾಗಿ ನಿರ್ವಹಿಸಿದ ಕಾರ್ಯಗಳು ಯಾರ ಕಣ್ಣಿಗೂ ಕಾಣದಾದರೆ, ದುಡಿಯುವ ಮಹಿಳೆ ಮನೆವಾರ್ತೆಯ ಜೊತೆಗೆ ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿ ಅವಳಾದ್ದಾಗಿದೆ.

ನಂದಿತಾ ಗಾಂಧಿ ಮತ್ತು ನಂದಿತಾ ಷಾ ರವರು ಭಾರತದ ಮಹಿಳಾ ಚಳುವಳಿಯ ಮೂರು ಅಲೆಗಳನ್ನು ಗುರುತಿಸಿದ್ದಾರೆ.

1. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರ ಒಗ್ಗೂಡುವಿಕೆ
2. ಸ್ವಾತಂತ್ರ್ಯೋತ್ತರದಲ್ಲಿ ಆರಂಭಿಕ ದಶಕ'ಗಳಲ್ಲಿ ಉಂಟಾದ ಬೆಳವಣಿಗೆ
3. 1975ರ ಅಂತಾರಾಷ್ಟ್ರೀಯ ಮಹಿಳಾ ವರ್ಷ ಘೋಷಣೆಯ ನಂತರ ವೇಗ ಪಡೆದ ಮಹಿಳಾ ಚಳುವಳಿ

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದ್ದರೂ, ಮಹಿಳೆಯರ ಮತದಾನದ ಹಕ್ಕೊತ್ತಾಯ ಮಾಡಿದ್ದರೂ, ಅದು ಮಹಿಳಾ ವಿಷಯ ಕೇಂದ್ರಿತವಾದ ಹೋರಾಟವಾಗಿರಲ್ಲಿಲ್ಲ. ವಿನೀತಾ ಕೌಲ್ ಅವರು ಆಧುನಿಕ ಭಾರತದಲ್ಲಿ ಮಹಿಳಾ ಚಳುವಳಿಯು, ರಾಜಾರಾಮ್ ಮೋಹನ್ ರಾಯ್, ಜ್ಯೋತಿ ಭಾ ಪುಲೆ ಮೊದಲಾದ ಸಮಾಜ ಸುಧಾರಣಾ ಚಳುವಳಿಗಳಿಂದ ಆರಂಭವಾಗಿದೆ ಎಂದು ವಾದಿಸುತ್ತಾರೆ.

ನಾಗರಿಕ ಪೂರ್ವಯುಗದಿಂದ ಆಧುನಿಕ ಯುಗ ಮತ್ತು ಜಾಗತಿಕರಣದವರೆಗಿನ ಮನುಕುಲದ ಇತಿಹಾಸವನ್ನೊಮ್ಮೆ ಸ್ಥೂಲವಾಗಿ ಗಮನಿಸಿದ್ದೇ ಆದರೆ, ಜಾತಿ ಮತ ಭಾಷೆ ದೇಶಾಂತರಗಳ ಎಲ್ಲೆ ಮೀರಿ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಯಾಗಿ ಕಂಡಿರುವುದು ಸ್ಪಷ್ಟ. ಭಾರತದ ಸಂದರ್ಭದಲ್ಲಿ ಪಿತೃ ಪ್ರಧಾನ ವ್ಯವಸ್ಥೆಯು ಮಹಿಳೆಯರಿಗೆ ನೀಡಿದ ಸ್ಥಾನಮಾನ ವೈರುಧ್ಯಗಳಿಂದ ಕೂಡಿದೆ. ಒಂದೆಡೆ ಶಬ್ದಾಡಂಬರದಲ್ಲಿ ಆರಾಧಿಸಿ, ದೈವತ್ವಕ್ಕೆ ಏರಿಸಿದರೆ, ವಾಸ್ತವದಲ್ಲಿ ಹುಟ್ಟುವ ಮೊದಲೇ ಹೆಣ್ಣು ಶಿಶುವೊಂದು ಭ್ರೂಣಾವಸ್ಥೆಯಲ್ಲಿ ಸತ್ತಿರುತ್ತದೆ. ಶಿಕ್ಷಣದಲ್ಲಿ ತಾರತಮ್ಯ, ಅಪೌಷ್ಠಿಕತೆ, ವಿವಾಹದ ಸಂದರ್ಭದಲ್ಲಿ ಆಯ್ಕೆ, ವರದಕ್ಷಿಣೆ, ಉದ್ಯೋಗ ಒಂದು ತೆರನಾದ ಸಮಸ್ಯೆಯಾದರೆ, ಸ್ತ್ರೀ–ಶಿಶುಹತ್ಯೆ, ದೌರ್ಜನ್ಯ, ಹಿಂಸೆ, ಅತ್ಯಾಚಾರ, ಪರಿತ್ಯಕ್ತತೆ ವೇಶ್ಯಾವೃತ್ತಿ, ಮಹಿಳೆ ಮತ್ತು ಹೆಣ್ಣುಮಕ್ಕಳ ಮಾರಾಟ ಅತಿ ಕ್ರೂರ ಸ್ವರೂಪದ ಸಮಸ್ಯೆಗಳಾಗಿ ರಕ್ತಬೀಜಾಸುರರಂತೆ ಬೆಳೆಯುತ್ತಿದೆ.

ಮನೆ ಮತ್ತು ಕುಟುಂಬ ಮಾನವರಿಗೆ ಭದ್ರತೆಯನ್ನು ನೀಡುವ ಸ್ಥಳವೆಂದು ಭಾವಿಸಿದರೆ ಅದು ಮಹಿಳೆಯರ ಪಾಲಿಗೆ ಅಲ್ಲವೆಂದೇ ಹೇಳಬಹುದು. ಭೂಮಿ ಮೇಲಿನ ಯಾವುದೇ ಸ್ಥಳ ಮಹಿಳೆ ಹಾಗೂ ಹೆಣ್ಣುಮಕ್ಕಳಿಗೆ ಸುರಕ್ಷಿತವಾಗಿ ಉಳಿದಿಲ್ಲ, ಜಾಗತಿಕವಾಗಿ 640 ಮಿಲಿಯನ್ ಗಿಂತ ಹೆಚ್ಚಿನ ಮಹಿಳೆಯರು ತಮ್ಮ ಗಂಡಂದಿರಿಂದ ಅಥವಾ ಹತ್ತಿರದ ಸಂಗಾತಿಯಿಂದ ಲೈಂಗಿಕ ಹಿಂಸೆಗೆ ಒಳಾಗಾಗಿದ್ದಾರೆ. ನೂರಾರು ಮಹಿಳೆಯರು ಪ್ರತಿದಿನ ತಮ್ಮ ಕುಟುಂಬದ ಸದಸ್ಯರಿಂದ ಕೊಲೆಯಾಗುತ್ತಿದ್ದಾರೆ'.

ಜಾಗತಿಕ ಮಟ್ಟದಲ್ಲಿ, ವಿಶ್ವಸಂಸ್ಥೆ ಚಾರ್ಟರ್ ಸ್ತ್ರೀ–ಪುರುಷರ ಸಮಾನತೆಯನ್ನು ಸಾರಿದೆ. 1948ರಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮಹಿಳೆಯರ ಸಮಾನ ಹಕ್ಕನ್ನು ಘೋಷಿಸಿದೆ, 1975ನೇ ವರ್ಷವನ್ನು ಮಹಿಳಾ ವರ್ಷವನ್ನಾಗಿ ಘೋಷಿಸಿದೆ. 1993 ರಲ್ಲಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮಹಿಳೆಯರ ಮೇಲಿನ ಹಿಂಸಾಚಾರದ ವಿರುದ್ಧದ ಘೋಷಣೆಯು ಮಹಿಳೆಯರ ಖಾಸಗಿ ಹಾಗೂ ಸಾರ್ವಜನಿಕ ಜೀವನದಲ್ಲಿ, ಬೆದರಿಕೆ, ಬಲಪ್ರಯೋಗ, ಸ್ವಾತಂತ್ರದ ಹರಣ ಇತ್ಯಾದಿಗಳನ್ನು ಒಳಗೊಂಡಂತೆ, ಯಾವುದೇ ಲಿಂಗ ಆಧಾರಿತ ಕ್ರಿಯೆ, ಮಹಿಳೆಯರ ಮೇಲೆ ದೈಹಿಕ, ಲೈಂಗಿಕ ಅಥವಾ ಮಾನಸಿಕ ಹಾನಿ ಮತ್ತು ನೋವನ್ನುಂಟು ಮಾಡುವುದನ್ನು ಮಹಿಳೆಯರ ಮೇಲಿನ ಹಿಂಸೆ ಎಂದು ವ್ಯಾಖ್ಯಾನಿಸಿದೆ.

ಜಾಗತಿಕ ಮಟ್ಟದಲ್ಲಿ ಹಲವಾರು ಹೋರಾಟಗಳು, ಚಳುವಳಿಗಳು, ಸ್ತ್ರೀಪರ ಕಾನೂನುಗಳು ಬಂದಿವೆ. ಭಾರತದಲ್ಲಿ ಸಹ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಮಹಿಳಾ ಸಂಘಗಳು ಮಹಿಳೆಯರ ಮತ್ತು ಹೆಣ್ಣುಮಕ್ಕಳ ಜೀವನ ಸುಧಾರಣೆಗೆ ಹೋರಾಟ ಮಾಡುತ್ತಿದೆ. ಇದೆಲ್ಲದರ ನಡುವೆ ಹೆಣ್ಣಿನ ಮೇಲೆ ನಡೆಯುವ ಅನ್ಯಾಯ, ಕೌರ್ಯ ನಿಂತಿಲ್ಲ. ಕೇವಲ ಘೋಷಣೆಗಳಿಂದ, ಕಾನೂನುಗಳಿಂದ ಮತ್ತು ಮಹಿಳಾ ಸಂಘಟನೆಗಳ ಪ್ರಯತ್ನಗಳಿಂದ ಮಹಿಳೆಯರ ಸಮಸ್ಯೆಗಳು ಕೊನೆ ಕಾಣುವುದಿಲ್ಲ. ಇದರ ಜೊತೆ ಕಾನೂನಿನ ಅನುಷ್ಠಾನ ಕಾನೂನನ್ನು ಗೌರವಿಸುವ, ಪಾಲಿಸುವಂತೆ ಮನುಕುಲದ

ಮನಪರಿವರ್ತನೆ ಅಷ್ಟೇ ಮುಖ್ಯ. ಎಲ್ಲಿಯವರೆಗೆ ನಾವುಗಳು ನಾಗರಿಕ ಸಮಾಜದ ಭಾಗವಾಗಿ ಮಹಿಳಾ ವಿಷಯಗಳನ್ನು ಹೃದಯದ ಕಣ್ಣಿನಿಂದ ನೋಡುವುದಿಲ್ಲವೋ ಅಲ್ಲಿವರೆಗೂ ಕಣ್ಣಿದ್ದೂ ಕುರುಡರಾಗುತ್ತೇವೆ.

**ಗ್ರಂಥ ಋಣ**


1. ಡಾ. ಎಮ್ ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು
2. ನಂದಿತಾ ಗಾಂಧಿ ಮತ್ತು ನಂದಿತಾ ಷಾ– ದಿ ಇಶ್ಯೂ ಅಟ್ ಸ್ಟೇಕ್: ಥಿಯರಿ ಅಂಡ್ ಪ್ರಾಕ್ಟೀಸ್ ಇನ್ ದಿ ಕಾನ್‌ಟೆಂಪರರಿ ವುಮೆನ್ಸ್ ಮೂವ್‌ಮೆಂಟ್ ಇನ್ ಇಂಡಿಯಾ
3. ವಿನಿತಾಕೌಲ್. ವುಮೆನ್ ಅಂಡ್ ದಿ ವಿಂಡ್ ಆಫ್ ಚೇಂಜ್
4. 1993ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮಹಿಳೆಯರ ಮೇಲಿನ ಹಿಂಸಾಚಾರದ ವಿರುದ್ಧದ ಘೋಷಣೆ